ಸಾಕ್ಷಿಯನ್ನು ದಿ:01.07.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಜೆ ಸಿ ಎಂ ವಕೀಲರಂದ:**

ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ ಆದರೆ ಇಂಗ್ಲೀಷ್ ಬರುವುದಿಲ್ಲ. ಈ ದಾವೆಯಲ್ಲಿ ಮಾಹಿತಿ ನಾನು ಒಬ್ಬನೇ ಕೊಟ್ಟಿದ್ದೇನೆ. ನಾನು ವಕೀಲರಿಗೆ ಕೊಟ್ಟಿರುವ ಮಾಹಿತಿ ಬಗ್ಗೆ ನನ್ನ ಅಕ್ಕತಂಗಿಯರು ಅಂದರೆ 1 ರಿಂದ 4 ನೇ ವಾದಿಯರಿಗೆ ತಿಳಿಸಿದ್ದೇನೆ. ನನ್ನ ತಂದೆ ಈ ದಾವೆ ಸಲ್ಲಿಸಿದ ನಂತರ ಅಂದರೆ 2014 ರಲ್ಲಿ ಮೃತ ಪಟ್ಟಿದ್ದಾರೆ. ದಾವೆ ಹಾಕಿದ 2 ತಿಂಗಳ ನಂತರ ನನ್ನ ತಂದೆ ಮೃತ ಪಟ್ಟಿರುತ್ತಾರೆ. ನನ್ನ ತಂದೆ ಸಾಯುವವರೆಗೆ ಓಡಾಡಿಕೊಂಡು ಮನೆತನ ನೋಡಿಕೊಂಡಿದ್ದರು ಎಂದರೆ ನಿಜ. ನನ್ನ ತಂದೆ ತಾನು ದುಡಿದು ತನ್ನ ಜೀವಿತಾವದಿಯಲ್ಲಿಯೇ ನನ್ನ ಮತ್ತು ನನ್ನ ಸಹೋದರಿಯರ ಮದುವೆ ಮಾಡಿದ್ದಾರೆ ಎಂದರೆ ನಿಜ. ನನ್ನ ತಂದೆ ಸಾಯುವವರೆಗೆ ಕುಟುಂಬದ ಎಲ್ಲಾ ವ್ಯವಾಹಾರ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆನಿಜ.

ಈ ದಾವೆಯಲ್ಲಿ ನಾವು ಮತ್ತು ಪ್ರತಿವಾದಿಯರು ಏನೆಲ್ಲಾ ದಾಖಲೆಗಳನ್ನು ಹಾಕಿದ್ದೇವೆ ಎಂದು ತಿಳಿದುಕೊಂಡಿದ್ದೇನೆ. ನನ್ನ ತಂದೆ ನನ್ನ ಅಣ್ಣ ಮೋಸ ಮಾಡಿದ್ದಾನೆ ಎಂದು ನಮ್ಮ ಕಡೆಯಿಂದ ಈ ದಾವೆ ಸಲ್ಲಿಸಿದ್ದಾನೆ. ನನ್ನ ತಂದೆಗೆ ವಿದ್ಯೆ ಬರುತ್ತಿರಲಿಲ್ಲ ಹಾಗಾಗಿ ನಮ್ಮ ಕಡೆಯಿಂದ ದಾವೆ ಹಾಕಿಸಿದ್ದಾರೆ. ಈ ದಾವೆ ಹಾಕುವ ಮುಂಚೆ ನಾವು ಮತ್ತು ನನ್ನ ತಂದೆ ಒಬ್ಬರಿಗೊಬ್ಬರು ಮಾತನಾಡುತ್ತಿದ್ದೆವು. ಈ ದಾವೆಯಲ್ಲಿ ಹಾಕಿರುವ ಎಲ್ಲಾ ದಾಖಲೆಗಳನ್ನು ನಾನೇ ತರಿಸಿದ್ದೆ. ನಿಪಿ-2 ನ್ನು ಸಾಕ್ಷಿಗೆ ತೋರಿಸಿ ದಾಖಲೆ ಪಡೆಯಲು ಕೊಟ್ಟ ಅರ್ಜಿದಾರನ ಹೆಸರು ಎಂದು ಕೇಳಿದಾಗ ಅದನ್ನು ನೋಡಿ ಭದ್ರಪ್ಪ ಇದೆ ಎಂದು ಹೇಳುತ್ತಾರೆ. ನನ್ನ ಅಕ್ಕತಂಗಿಯರು ಯಾವ ವರ್ಷದಲ್ಲಿ ಹುಟ್ಟಿರುತ್ತಾರೆ ಎಂದು ನೆನಪಿಲ್ಲ. ನನ್ನ ಎಲ್ಲಾ ಸಹೋದರಿಯರು ಮತ್ತು ನಾನು ಮ್ಯಾದನಹೊಳೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ

ಮಾಡಿದ್ದೇವೆ ಎಂದರೆ ನಿಜ. ಸಾಕ್ಷಿಗೆ ವಿರುಪಾಕ್ಷಪ್ಪ, ಕವಿತಮ್ಮ, ಲೀಲಾವತಿ, ಉಮಾದೇವಿ ಹಾಗೂ ರತ್ನಮ್ಮ ಇವರೆಲ್ಲರ ಶಾಲಾ ದಾಖಲಾತಿಗಳನ್ನು ತೋರಿಸಿ ಅವುಗಳಲ್ಲಿರುವ ಎಲ್ಲಾ ಬರವಣಿಗೆ ಸರಿಯಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸರಿ ಇದೆ ಎಂದು ನುಡಿಯುತ್ತಾರೆ. ಆದ್ದರಿಂದ ಈ 5 ದಾಖಲೆಗಳನ್ನು ನಿಡಿ-67 ರಿಂದ 71 ಎಂದು ಗುರುತಿಸಲಾಯಿತು.

ಪಿತ್ರಾರ್ಜಿ ಆಸ್ತಿ ಸಾಮಾನ್ಯವಾಗಿ ವಾರಸದಾರನಿಂದ ಯಾರಿಗೆ ಸೇರ ಬೇಕು ಅನ್ನುವುದು ಗೊತ್ತಿದೆ. ದಾಸಪ್ಪನಿಗೆ ನೇರ  ವಾರಸುದಾರರು ಇಲ್ಲ ಎಂದು ಮಧ್ಯಂತರ ಅರ್ಜಿ 6 ಹಾಕಿದ್ದೇವೆ ಅನ್ನುವುದು ನಿಜ.  ಮಧ್ಯಂತರ ಅರ್ಜಿ 6 ರ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.  ಸದರಿ ದಾಸಪ್ಪನಿಗೆ ಇನ್ನೂ ಬೇರೆ ವಾರಸುದಾರರು ಇದ್ದಾರೆಂದು ಸದರಿಯವರು ಮಧ್ಯಂತರ ಅರ್ಜಿ 7 ಹಾಕಿದ್ದಾರೆ ಅನ್ನುವುದುನಿಜ. ಸದರಿ ಅರ್ಜಿಗೆ ನಾವು ತಕರಾರು ಸಲ್ಲಿಸಿಲ್ಲ. ಸದರಿ ಮಧ್ಯಂತರ ಅರ್ಜಿ 7 ಕ್ಕೆ 2 ರಿಂದ 4 ಮತ್ತು 8 ರಿಂದ 10 ನೇ ಪ್ರತಿವಾದಿಯರು ತಕರಾರು ಸಲ್ಲಿಸಿದ್ದಾರೆ ಎಂದರೆ ನಿಜ. ದಾಸಪ್ಪನ ವಾರಸುದಾರರಿಗೆ ನ್ಯಾಯಾಲಯಕ್ಕೆ ಕರೆಸಿ ಅವರ ಜೊತೆ ಶರೀಕಾಗಿ ಮಧ್ಯಂತರ ಅರ್ಜಿ ಸಲ್ಲಿಸಿದ ನಂತರ ನೇರ ವಾರಸುದಾರರ ಇಲ್ಲವೆಂದು ಸುಳ್ಳು ಸಾಕ್ಷಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ನ್ಯಾಯಾಲಯದ ಪೂರ್ವಹ್ನ ಸಮಯ ಮುಗಿದಿದ್ದು ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು  ಮಾಡಲಾಯಿತು.

ಓ ಹೇ ಕೇ  ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ  ಎಂ ಎಫ್ ಸಿ ಹಿರಿಯೂರು.